(ಆ) ಒಳನಾಡಿನ ಜಲಾಶಯಗಳಿಂದ ಉತ್ಪತ್ತಿಯಾಗುತ್ತಿರುವ ಮೀನಿನ ಪ್ರಮಾಣವೆಷ್ಟು ಮತ್ತು ಪ್ರತಿ ಎಕರೆ ಇಳುವರಿ ಎಷ್ಟು ?

(ಇ) ಮೀನಿನ ಇಳುವರಿಯನ್ನು ಹೆಚ್ಚಿಸಲು ಸರಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಸಿ. ಬೈರೇಗೌಡ (ಮೀನುಗಾರಿಕೆ ಮತ್ತು ಬಂದರು ಸಚಿವರು).—

(ಅ) ಕರ್ನಾಟಕದಲ್ಲಿ ಒಳನಾಡು ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸಲು ಸುಮಾರು ೪ ಲಕ್ಷ ಹೆಕ್ಟೇರ್ ನೀರಿನ ವಿಸ್ತೀರ್ಣವಿದೆ. ಇದರಲ್ಲಿ ಸುಮಾರು ೦.೧೪ ಲಕ್ಷ ಹೆಕ್ಟೇರ್ ನೀರಿನ ವಿಸ್ತೀರ್ಣ ಕೋಲಾರ ಜಿಲ್ಲೆಯಲ್ಲಿದೆ. ಇದು ರಾಜ್ಯದ ವಿಸ್ತೀರ್ಣಕ್ಕೆ ಹೋಲಿಸಿದರೆ ಶೇ. ೭.೮೧ ರಷ್ಟಿರುತ್ತದೆ.

(ಆ) ಪ್ರತಿ ಎಕರೆಗೆ ಆಗುತ್ತಿರುವ ಮೀನಿನ ಉತ್ಪತ್ತಿ.—

(ಎ) ೫೦೦ ಎಕರೆಗೆ ಮತ್ತು ಅದಕ್ಕಿಂತ ಸಣ್ಣ ಜಲಾಶಯಗಳಿಂದ ಆಗುತ್ತಿರುವ ಉತ್ಪತ್ತಿ ಎಕ್ಕರೆ ಒಂದಕ್ಕೆ ೧೦೦ ಕೆ.ಜಿ.

(ಬಿ) ೫೦೦ ರಿಂದ ೫೦೦೦ ಎಕರೆಗೆ ವಿಸ್ತೀರ್ಣವುಳ್ಳ ಜಲಾಶಯಗಳಿಂದ ಉತ್ಪತ್ತಿ ಎಕರೆ ಒಂದಕ್ಕೆ ೪೦ ಕೆ.ಜಿ.

(ಸಿ) ೫೮೦೦ ಎಕರೆಗಿಂತ ಹೆಚ್ಚು ವಿಸ್ತೀರ್ಣವುಳ್ಳ ಜಲಾಶಯಗಳಿಂದ ಉತ್ಪತ್ತಿ ಎಕರೆ ಒಂದಕ್ಕೆ ೪ ಕೆ.ಜಿ.

(ಇ) ರಾಜ್ಯದಲ್ಲಿ ಮೀನಿನ ಉತ್ಪತ್ತಿಯನ್ನು ಹೆಚ್ಚಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳು ಈ ಕೆಳಕಂಡಂತಿವೆ.

(೧) ಇಲಾಖೆಯಲ್ಲಿರುವ ಮೀನಿನ ಉತ್ಪತ್ತಿ ಕೇಂದ್ರಗಳಿಂದ ಮೀನುಮರಿ ಉತ್ಪಾದನೆ ಹೆಚ್ಚಿಸಲಾಗುತ್ತಿದೆ.

(೨) ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳ ಮೂಲಕ ಮೀನುಗಾರಿಕೆಯನ್ನು ತೀಕ್ಷ್ಣ ಅಭಿವೃದ್ಧಿಗೊಳಿಸಲಾಗುತ್ತಿದೆ.

(೩) ಜಲಾಶಯಗಳಲ್ಲಿ ಮೀನುಗಾರಿಕೆ ಅಭಿವೃದ್ಧಿ.

(೪) ವಿಶ್ವ ಬ್ಯಾಂಕಿನ ಆರ್ಥಿಕ ನೆರವಿನಿಂದ ಜಲಾಶಯಗಳ ಮೀನುಗಾರಿಕೆ ಅಭಿವೃದ್ಧಿ ಯೋಜನೆಗೆ ಕೈಗೆಲಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಒಳನಾಡಿನ ಮೀನುಗಾರಿಕೆ ಇಲಾಖೆಯಲ್ಲಿ ಒಂದು ಕೋಟಿ ರೂಪಾಯಿಗೆ ಮೇಲ್ಪಟ್ಟು ಖರ್ಚಾಗುತ್ತಿದೆ. ಆದ್ದರಿಂದ, ಮೀನುಗಾರಿಕೆಯಲ್ಲಿ ಎಷ್ಟು ಉತ್ಪನ್ನವಾಗುತ್ತಿದೆ ಮತ್ತು ಆಗತಕ್ಕ ಖರ್ಚಿಗೂ ಮತ್ತು ಉತ್ಪನ್ನಕ್ಕೂ ವತ್ಯಾಸ ಎಷ್ಟಿದೆ ?

ಶ್ರೀ ಸಿ. ಬೈರೇಗೌಡ.—ಯಾವ ಯಾವ ಕೆರೆಯಲ್ಲಿ ಎಷ್ಟೆಷ್ಟು ಉತ್ಪನ್ನವಾಗುತ್ತಿದೆ ಎನ್ನುವ ಬಗ್ಗೆ ವಿವರಗಳನ್ನು ಕೊಟ್ಟಿದ್ದೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಒಟ್ಟು ಉತ್ಪನ್ನವನ್ನು ಕೊಟ್ಟಿಲ್ಲ.

ಶ್ರೀ ಸಿ. ಬೈರೇಗೌಡ.—ರಾಜ್ಯದಲ್ಲಿ ಒಟ್ಟು ೪೦ ಸಾವಿರದಿಂದ ೪೫ ಸಾವಿರ ಮೆಟ್ರಿಕ್ ಟನ್ ಉತ್ಪಾದನೆಯಾಗುತ್ತಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಮೀನುಗಾರಿಕೆ ಇಲಾಖೆಯಲ್ಲಿ ಅಧಿಕಾರಿಗಳಿಗಾಗಿ ಒಂದು ಕೋಟಿ ರೂಪಾಯಿ ಮೇಲೆ ಖರ್ಚಾಗುತ್ತದೆ. ಅಷ್ಟು ಹಣದ ಉತ್ಪನ್ನ ಆಗುತ್ತಿದೆಯೇ ?

ಶ್ರೀ ಸಿ. ಬೈರೇಗೌಡ.—ಎಲ್ಲಾ ಸಮರ್ಪಕವಾಗಿದೆ ಎಂದು ನಾನು ಹೇಳುತ್ತಿಲ್ಲ. ಮೀನು ಉತ್ಪಾದನೆ ಹೆಚ್ಚಿಸಲಿಕ್ಕೆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ.

ಸಂಡೂರು ವಿಧಾನ ಸಭಾ ಕ್ಷೇತ್ರದಲ್ಲಿರುವ ಆಸ್ಪತ್ರೆ ಸೌಲಭ್ಯಗಳು

೩೩೪ ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

೧. ಸಂಡೂರು ಕ್ಷೇತ್ರದ ತುಂಬರಗುದ್ದಿ ಮತ್ತು ಉಬ್ಬಲಗುಂಡಿ ಗ್ರಾಮಗಳಿಗೆ ಆಸ್ಪತ್ರೆಗಳು ಅತ್ಯಾವಶ್ಯಕವಾಗಿದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೆ ?

೨. ಉಬ್ಬಲಗುಂಡಿ ಗ್ರಾಮದಲ್ಲಿ ಆಸ್ಪತ್ರೆ ಕಟ್ಟಡವಿದ್ದೂ ಸಿಬ್ಬಂದಿ ವರ್ಗವನ್ನು ಇಲ್ಲಿಯವರೆಗೂ ಕೊಡದಿರಲು ಕಾರಣವೇನು ?

೩. ತುಂಬರಗುದ್ದಿ ಗ್ರಾಮಕ್ಕೆ ಮಂಜೂರಾದ ಆಸ್ಪತ್ರೆಯನ್ನು ರದ್ದುಗೊಳಿಸಲು ಕಾರಣಗಳೇನು?

೪. ಈ ಎರಡೂ ಆಸ್ಪತ್ರೆಗಳನ್ನು ಯಾವಾಗ ಪ್ರಾರಂಭ ಮಾಡಲಾಗುವುದು ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು). —

೧. ಬಂದಿದೆ.

೨. ಉಬ್ಬಲಗುಂಡಿ ಗ್ರಾಮಕ್ಕೆ ಸರ್ಕಾರದಿಂದ ಪ್ರಾಥಮಿಕ ಆರೋಗ್ಯ ಘಟಕವು ಮಂಜೂರಾಗಿಲ್ಲ.

೩. ಸರ್ಕಾರದ ಆದೇಶದ ಸಂಖ್ಯೆ ಹೆಚ್.ಎಂ.ಎ. ೨೫೩ ಪಿಪಿಎಸ್ ೭೪, ದಿನಾಂಕ ೪–೭–೧೯೭೪ರಲ್ಲಿ ತುಂಬರಗುದ್ದಿ ಗ್ರಾಮಕ್ಕೆ ಒಂದು ಆರೋಗ್ಯ ಉಪಕೇಂದ್ರವು ಮಂಜೂರಾಗಿದ್ದು, ಈ ಆದೇಶದಲ್ಲಿ ವಿಧಿಸಿರುವ ಷರತ್ತುಗಳನ್ನು ಸ್ಥಳೀಯ ಜನರು ಪೂರೈಸದೇ ಹೋದುದರಿಂದ ತುಂಬರಗುದ್ದಿ ಸಬ್ ಸೆಂಟರ್‌ನ್ನು ರದ್ದುಗೊಳಿಸಲಾಯಿತು.

೪. ಮೇಲೆ ಕೊಟ್ಟ ಉತ್ತರಗಳಿಂದಾಗಿ ಈ ಎರಡೂ ಸ್ಥಳಗಳಲ್ಲಿ ಆಸ್ಪತ್ರೆಗಳನ್ನು ಪ್ರಾರಂಭಿಸುವ ವಿಚಾರ ಉದ್ಭವಿಸುವುದಿಲ್ಲ.

ಶ್ರೀ ಯು. ಭೂಪತಿ.—ತುಂಬರಗುದ್ದಿ ಗ್ರಾಮಕ್ಕೆ ಮೆಡಿಕಲ್ ಸಬ್ ಸೆಂಟರ್ ಮಂಜೂರಾಗಿದ್ದು, ಸ್ಥಳೀಯ ಜನರು ಸರ್ಕಾರದ ಆದೇಶದಲ್ಲಿ ವಿಧಿಸಿರುವ ಷರತ್ತುಗಳನ್ನು ಪೂರೈಸದೇ ಇದ್ದುದರಿಂದ, ಮತ್ತೆ ರದ್ದುಗೊಳಿಸಲಾಗಿದೆ ಎಂದು ತಿಳಿಸಲಾಗಿದೆ. ಇನ್ನು ಉಬ್ಬಲಗುಂಡಿ ಗ್ರಾಮದಲ್ಲಿ ಒಂದು ಒಂದೂವರೆ ಲಕ್ಷ ರೂಪಾಯಿ ಬಿಲ್ಡಿಂಗ್ ಇದೆ. ಇದಕ್ಕೆ ಮುಂಚೆ ಅಲ್ಲಿಗೆ ಒಬ್ಬರು ಎ.ಎನ್.ಎಮ್.ನ್ನು ಪೋಸ್ಟ್ ಮಾಡಿದ್ದರು. ಅಲ್ಲಿ ಬಿಲ್ಡಿಂಗ್ ಮತ್ತು ಜಾಗ ಖಾಲಿ ಇದೆ. ಆದರೆ ಎ.ಎನ್.ಎಮ್ ಅವರನ್ನು ವಾಪಸ್ಸು ಕರೆಸಿಕೊಂಡಿದ್ದಾರೆ. ಇನ್ನು ತುಂಬರಗುಡ್ಡಿ ಗ್ರಾಮಕ್ಕೆ ಮೆಡಿಕಲ್ ಸಬ್ ಸೆಂಟರ್ ಅಗತ್ಯ ಇದೆ. ಅದಕ್ಕೆ ಬೇಕಾದ ಅವಶ್ಯಕತೆಯನ್ನು ಸ್ಥಳೀಯ ಜನರು ಪೂರೈಸಿದರೆ ಆದಷ್ಟು ಬೇಗ ಪ್ರಾರಂಭ ಮಾಡುತ್ತೀರಾ ?

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ತುಂಬರಗುಡ್ಡಿ ಗ್ರಾಮದ ಸ್ಥಳೀಯ ಜನರು ಸರ್ಕಾರದ ಆದೇಶದಲ್ಲಿ ವಿಧಿಸಿರುವ ಷರತ್ತುಗಳನ್ನು ಒಪ್ಪಿಕೊಳ್ಳದೇ ಹೋದುದರಿಂದ, ತಾಲ್ಲೂಕ್ ಬೋರ್ಡ್‌ನವರೇ ತೀರ್ಮಾನ ಮಾಡಿ ಅದನ್ನು ಬೇರೆ ಊರಿಗೆ ಷಿಫ್ಟ್ ಮಾಡಲಿಕ್ಕೆ ಹೇಳಿದ್ದಾರೆ. ಅಲ್ಲಿ ಬಿಲ್ಡಿಂಗ್ ಸರ್ಕಾರದವರು ಕಟ್ಟಿಸಿಲ್ಲ, ಮೈನಿಂಗ್ ಡಿಪಾರ್ಟ್‌ಮೆಂಟಿನವರು ಕಟ್ಟಿಸಿದ್ದಾರೆ. ೧೫ ಸಾವಿರ ಪ್ರಜಾಸಂಖ್ಯೆಗೆ ಒಂದು ಆರೋಗ್ಯ ಘಟಕ ಮಾಡುತ್ತಿದ್ದೇವೆ. ಈಗ ಅಲ್ಲಿ ೧೫ ಸಾವಿರ ಪ್ರಜಾಸಂಖ್ಯೆ ಇದ್ದು, ಅವಶ್ಯಕತೆ ಇದ್ದರೆ ಖಂಡಿತ ಮಂಜೂರು ಮಾಡುತ್ತೇವೆ. ಈಗ ನಮ್ಮಲ್ಲಿ ಬಿಲ್ಡಿಂಗ್ ಇದೆ, ಆಸ್ಪತ್ರೆ ಮಂಜೂರು ಮಾಡಿ ಎಂದು ಬಂದರೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಯು. ಭೂಪತಿ.—ಅವಶ್ಯಕತೆಗಳನ್ನು ಸ್ಥಳೀಯ ಜನರು ಪೂರೈಸಿಲ್ಲ ಎಂದು ಒಂದು ವಿಚಾರಕ್ಕೆ ಹೇಳಿದ್ದೀರಿ. ಮತ್ತೊಂದು ವಿಚಾರದಲ್ಲಿ ಬಿಲ್ಡಿಂಗ್ ಇದ್ದರೂ ಆಸ್ಪತ್ರೆ ಮಂಜೂರು ಮಾಡಿಲ್ಲ. ಇದು ನಿಮ್ಮ ಅಧಿಕಾರಿಗಳ ನಿರ್ಲಕ್ಷದ ಕಾರಣ ಇರಬೇಕೇ ವಿನಹ ಬೇರೆ ಕಾರಣ ಇಲ್ಲ ಎಂದು ಹೇಳಬೇಕಾಗುತ್ತದೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಈಗ ನಮ್ಮ ಸರ್ಕಾರದ ಬಿಲ್ಡಿಂಗ್ ಅಲ್ಲಿ ಇಲ್ಲ. ಅಲ್ಲದೆ, ಸ್ಥಳೀಯ ಜನರಂ ಅಲ್ಲಿಗೆ ಬೇಕಾದ ಅವಶ್ಯಕತೆ ಪೂರೈಸದೇ ಇದ್ದುದರಿಂದ, ತಾಲ್ಲೂಕ್ ಬೋರ್ಡ್‌ನವರೆ ಒಂದು ರೆಸಲ್ಯೂಷನ್ ಮಾಡಿ ಬೇರೆ ಕಡೆ ಮಾಡಿ ಎಂದು ಹೇಳಿದ್ದರಿಂದ ಮಾಡಿದ್ದೇವೆ.

ಸರಕಾರಿ ನೌಕರರ ಮನೆ ಮುಂಗಡ ಹಣವನ್ನು ಹೆಚ್ಚಿಸುವ ಬಗ್ಗೆ

೭ ಶ್ರೀ ಎಂ. ಪಿ. ಕೇಶವಮೂರ್ತಿ (ಆನೇಕಲ್).— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಮನೆ ಕಟ್ಟುವ ಸಾಮಗ್ರಿಗಳು, ಇತರೆ ವೆಚ್ಚ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಿವೇಶದ ಬೆಲೆಗಳು ತುಂಬಾ ದುಬಾರಿಯಾಗಿರುವುದರಿಂದ ಸರಕಾರಿ ನೌಕರರಿಗೆ ಸರಕಾರದಿಂದ ನೀಡುವ ಮನೆ ಮುಂಗಡ ಹಣ ಯಾವುದಕ್ಕೂ ಸಾಲದಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ.

(ಆ) ಈಗಾಗಲೇ ಕೇಂದ್ರ ಸರ್ಕಾರವು ತನ್ನ ನೌಕರರಿಗೆ ಕೊಡುವ ಮನೆ ಮುಂಗಡ ಹಣವನ್ನು ಹೆಚ್ಚಿಸಿರುವ ರೀತಿಯಲ್ಲಿ ರಾಜ್ಯದ ಸರಕಾರಿ ನೌಕರರಿಗೆ ಮುಂಗಡ ನೀಡುವ ಹಣದ ಮೊತ್ತವನ್ನು ಹೆಚ್ಚಿಸಲು ಕ್ರಮ ತೆಗೆದುಕೊಳ್ಳುವಿರಾ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

(ಅ) ಬಂದಿದೆ.

(ಆ) ಪರಿಶೀಲಿಸಲಾಗುತ್ತಿದೆ.

ಶ್ರೀ ಎಂ.ಪಿ. ಕೇಶವಮೂರ್ತಿ.—ಈಗ ಕೇಂದ್ರಸರ್ಕಾರದವರು ಕೊಡತಕ್ಕ ಮನೆ ಮುಂಗಡ ಹಣ ಎಷ್ಟು ಇದೆ, ಎಷ್ಟು ಹಣವನ್ನು ರಾಜ್ಯಸರ್ಕಾರದವರು ತನ್ನ ನೌಕರರಿಗೆ ಕೊಟ್ಟರೆ ಪ್ರಯೋಜನವಾಗುತ್ತದೆ. ಏಕೆಂದರೆ, ಇವೊತ್ತು ಬಿ.ಡಿ.ಎ. ನಿವೇಶನದ ಬೆಲೆ ಜಾಸ್ತಿಯಾಗಿರುವುದರಿಂದ, ಮನೆ ಕಟ್ಟಲಿಕ್ಕೆ ಅನಾನುಕೂಲವಾಗಿ ಬಹಳ ನೌಕರರು ತೊಂದರೆಯಲ್ಲಿದ್ದಾರೆ. ಆದ್ದರಿಂದ, ಆದಷ್ಟು ಬೇಗ ಕೇಂದ್ರಸರ್ಕಾರದವರು ಕೊಡುವಂತೆ ೭೫ ತಿಂಗಳ ಸಂಬಳವನ್ನು ಕೊಟ್ಟರೆ ರಾಜ್ಯಸರ್ಕಾರದ ನೌಕರರೂ ಸಹ ಮನೆಗಳನ್ನು ಕಟ್ಟಲಿಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ, ಮಾನ್ಯ ಮುಖ್ಯ ಮಂತ್ರಿಗಳು ಈ ಬಗ್ಗೆ ವಿಚಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರ ಸೂಚನೆಯನ್ನು ಗಮನಿಸುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು.

ರಾಜ್ಯದಲ್ಲಿ ೧೯೮೩-೮೪ನೇ ಸಾಲಿನ ವೃತ್ತಿ ತೆರಿಗೆ ವಸೂಲಾತಿ.

೨. ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು).— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೩-೮೪ನೇ ಸಾಲಿನಲ್ಲಿ ಕರ್ನಾಟಕದ ರಾಜ್ಯದಲ್ಲಿ ವಸೂಲಾದ ವೃತ್ತಿ ತೆರಿಗೆಯ ಒಟ್ಟು ಮೊಬಲಗೆಷ್ಟು?

ಆ) ಸದರಿ ಸಾಲಿನಲ್ಲಿ ವಸೂಲಾತಿಗೆ ಸಂಬಂಧಿಸಿದಂತೆ ಅಧಿಕಾರಿಗಳ ಸಂಭಳ, ಪ್ರಯಾಣ ಭತ್ಯೆ, ಕಛೇರಿ ಬಾಡಿಗೆ, ಹಾಗೂ ಇನ್ನಿತರ ವೆಚ್ಚಗಳು ಸೇರಿದಂತೆ ವೆಚ್ಚವಾದ ಒಟ್ಟು ಮೊಬಲಗೆಷ್ಟು?

ಇ) ವಸೂಲಾತಿಗೆ ಒಳಪಟ್ಟ ತೆರಿಗೆದಾರರ ಸಂಖ್ಯೆ ಎಷ್ಟು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ೫೫.೬೮ ಕೋಟಿ ರೂಪಾಯಿಗಳು

ಆ) ಒಟ್ಟು ವೆಚ್ಚ ರೂ. ೨೫,೧೩,೪೦೫-೫೮

ಇ) ೩.೬೧ ಲಕ್ಷ ತೆರಿಗೆದಾರರು.

* * *

ಮಾನ್ಯ ಸದಸ್ಯರು ಹಾಜರಿರಲಿಲ್ಲ